ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಕೆಲಸ ಪೂರ್ತಿಯಾಗಿರತಕ್ಕಂಥಹ ಸೇತುವೆಗಳು ಇವು ? Constuction of a bridge 3/3 accross the Jagaradahalli river, BKG riverನ ಸೇತುವೆ ಕೆಲಸ ಪೂರ್ತಿಯಾಗಿದೆ. Construction of a bridge 5/3 across the Gattihalla river HKG Road ಸೇತುವೆ ಕೆಲಸ ಪೂರ್ತಿಯಾಗಿದೆ. Construction of Bridge Byavalli halla BKG Road ಪೂರ್ತಿಯಾಗಿದೆ Construction of Binnadi Bridge across Somavathi river ಸೇತುವೆ ಕೆಲಸ ಪೂರ್ತಿಯಾಗಿದೆ. ಈ ೪ ಸೇತುವೆಗಳ ಕೆಲಸ ಪೂರ್ತಿಯಾಗಿದೆ. ಆ ಮೇಲೆ ಮಂಜೂರಾತಿ ದೊರೆತಿರುವ ಸೇತುವೆಗಳೆಂದರೆ Construction of a bridge across Hemvathi river BKG Road ಈ ಸೇತುವೆಗೆ ೧.೫ ಲಕ್ಷ ರೂಪಾಯಿಗಳು ಮಂಜೂರಾಗಿದೆ. ಕೆಲಸ ನಡೆಯುತ್ತಿದೆ. ಆದರೆ ಈಗ ಸಿಮೆಂಟ್ ಕೊರತೆ ಇರುವುದರಿಂದ ಕೆಲಸವನ್ನು ನಿಲ್ಲಿಸಲಾಗಿದೆ. ಮತ್ತು Construction of a bridge acoross Bakkihalla. Mudigere Taluk ಈ ಸೇತುವೆಗೆ ೧೯೭೬-೭೭ರಲ್ಲಿ ಮಂಜೂರಾತಿ ದೊರೆತಿದ್ದು ಮೊದಲು ಪಡೆದಂತಹ ಗುತ್ತಿಗೆದಾರರು ಕೆಲಸ ಮಾಡದೆ ಇರುವುದರಿಂದ ಅವರ ಗುತ್ತಿಗೆಯನ್ನು ರದ್ದುಮಾಡಿ ಬೇರೆ ಗುತ್ತಿಗೆದಾರರಿಗೆ ನಾವು ಕೊಟ್ಟಿದ್ದೇವೆ. ಇದನ್ನು ೧೯೮೧-೮೨ರ ಹೊತ್ತಿಗೆ ಪೂರ್ತಿ ಮಾಡಬೇಕೆಂದು ಇದೆ. ಆದರೆ ನಾವು ನಿರೀಕ್ಷಿಸಿದಷ್ಟು ಮಟ್ಟಿಗೆ ಕೆಲಸ ಆಗಲಿಲ್ಲ. ಆದೇ ರೀತಿ ಸುಂಕನಾಲೆ ಹಳ್ಳದ ಸೇತುವೆಗೆ ೧೯೮೦-೮೧ ರಲ್ಲಿ ಮಂಜೂರಾತಿಯಾಗಿದೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಫೌಂಡೇಷನ್ ಕೆಲಸ ಪೂರ್ಣವಾಗಿದೆ. ಆದರೆ ಸಿಮೆಂಟಿನ ಕೊರತೆಯಿಂದ ಮುಂದಿನ ಕೆಲಸ ಸ್ವಲ್ಪ ಸ್ಥಗಿತವಾಗಿದೆ. ಗುಲ್ಲಾಳ್ ಪೇಟೆ ಬಳಿ ಇರತಕ್ಕಂಥ ನೇಸ್‌ಕಲ್‌ಹಳ್ಳದ ಸೇತುವೆಗೆ ೧೯೮೦-೮೧ರಲ್ಲಿ ಮಂಜೂರಾತಿ ಸಿಕ್ಕಿದೆ. ಇದಕ್ಕೆ ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದೇವೆ. ಆದರೆ ಸಿಮೆಂಟಿನ ಕೊರತೆಯಿಂದ ಕೆಲಸ ಪ್ರಾರಂಭವಾಗಿಲ್ಲ.

ಶ್ರೀಮತಿ ಮೋಟಮ್ಮ.—ಬಕ್ಕಿಹಳ್ಳದ ಸೇತುವೆಗೆ ೧೯೭೬-೭೭ ರಲ್ಲಿ ಮಂಜೂರಾತಿ ಸಿಕ್ಕಿದೆ. ಈಗ ನಾವು ೧೯೮೧ನೇ ಇಸವಿಯಲ್ಲಿದ್ದೇವೆ, ಆದರೂ ಕೆಲಸ ಮುಗಿಯದಿರಲು ಕಾರಣವೇನು ? ಈ ಕೆಲಸ ಮುಗಿಯದ ಕಾರಣ ಮಲೆನಾಡು ಭಾಗದ ಬಹಳ ಜನರಿಗೆ ತೊಂದರೆಯಾಗಿದೆ, ಆದಕಾರಣ ಈ ಕೆಲಸವನ್ನು ಆದಷ್ಟು ಬೇಗ ಮುಗಿಸುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಖಂಡಿತವಾಗಿ.

Boranakanive Channel in Huliyur Hobli, C. N. Halli Taluk

232 SRI D. B. JAYACHANDRA (Kallambella).—Will the Minister for Transport and Minor Irrigation be pleased to state :

(*a*) whether representations are made to Government to extend the Boranakanive Channel in Huliyar Hobli, C. N. Halli Taluk and to make available water at atchkats behind Marenadu town and also to fill the Marenadu tank which is getting insufficient water ?

(*b*) whether the representations have been examined and plans and estimates for the work have been prepared if so, when ?

SRI M. M. J. SADYOJATHA (Minister for Transport and Minor Irrigation).—

(*a*) Yes.

(*b*) The question of availability of surplus water in B. K. Dam as well as surplus in the entire valley is under detailed investigation.

ಶ್ರೀ ಟಿ. ಬಿ. ಜಯಚಂದ್ರ.—ಇಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಬೋರನ ಕಣಿವೆಯಲ್ಲಿ ಹಾಗೂ ಇಡೀ ಕಣಿವೆಯಲ್ಲಿ ದೊರಕಲಿರುವ ಹೆಚ್ಚುವರಿ ಪ್ರಮಾಣದ ನೀರಿನ ವಿಷಯವು ವಿವರವಾದ

ತನಿಖೆಯಲ್ಲಿದೆ ಎಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಕಳುಹಿಸಿ ೨ ವರ್ಷಗಳಾಯಿತು. ಆದರೂ ಸಹ ಇಲ್ಲಿ ವಿವರವಾದ ತನಿಖೆಯಲ್ಲಿದೆ ಎಂದು ಹೇಳಿದ್ದೀರಿ. ಅಂದರೆ ಈ ತನಿಖೆ ಮುಂಗಿಯಲು ಇನ್ನು ಎಷ್ಟು ವರ್ಷಗಳು ಬೇಕು ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಎಷ್ಟು ವರ್ಷಗಳು ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ವರದಿ ತರಿಸುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಸಚಿವರಿಗೆ ಅಲ್ಲಿನ ವಾಸ್ತವ ಸಂಗತಿ ಬಹುಶಃ ಗೊತ್ತಿಲ್ಲ ವೆಂದು ಕಾಣುತ್ತದೆ. ಅಲ್ಲಿ ಈಗ ಚಾನಲ್ ಇದೆ. ಈ ಚಾನಲ್‌ನಿಂದ ನೀರು ಕೊಡುವುದನ್ನು ಕೆಲವು ವರ್ಷಗಳಿಂದ ನಿಲ್ಲಿಸಿದ್ದಾರೆ. ಮತ್ತೆ ಅದೇ ಚಾನಲ್‌ನಿಂದ ನೀರನ್ನು ಕೊಡಿ ಎಂದು ಪ್ರಶ್ನೆ ಕೇಳಿದರೆ ಇಲ್ಲಿ ಈ ವಿಷಯವು ವಿವರವಾದ ತನಿಖೆಯಲ್ಲಿದೆ ಎಂದು ಹೇಳಿದ್ದಾರೆ. ನೀರನ್ನು ಒದಗಿಸಬೇಕೆಂದು ಅನೇಕ ಅರ್ಜಿಗಳನ್ನು ಸಂಬಂಧಪಟ್ಟವರಿಗೆ ಕೊಡಲಾಯಿತು. ಆದರೆ ಕೆಲಸವಾಗಲಿಲ್ಲ. ನಂತರ ಪ್ರಶ್ನೆ ಹಾಕಿದರೆ ನೀರು ಸಿಗಬಹುದೆಂದು ಪ್ರಶ್ನೆ ಹಾಕಿದೆ. ಆದರೆ ಇಲ್ಲಿ ಇಂತಹ ಉತ್ತರ ಕೊಟ್ಟಿದ್ದಾರೆ. ಇಲ್ಲಿ ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳೂ ಸಹ ಇದ್ದಾರೆ. ಮೊನ್ನೆ ದಿವಸ ಇಂಜಿನಿಯರ್‌ಗಳು ಯಾವ ರೀತಿ ಎಸ್ಟಿಮೇಟ್ ಮಾಡಿ ಕಳುಹಿಸಿಕೊಡುತ್ತಾರೆಂಬುದನ್ನು ಅವರ ಗಮನಕ್ಕೆ ತಂದೆ. ಈಗ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಅಧಿಕಾರಿಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿದ್ದಾರೆಂಬುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಾಗಿಲ್ಲ. ಈಗ ಅಲ್ಲಿರುವ ಟ್ಯಾಂಕ್‌ನ ನೀರು ಸರಿಯಾಗಿ ಅಂದರೆ ಕಾಲು ಭಾಗ ನೀರೂ ಸಹ ಸರಿಯಾಗಿ ಉಪಯೋಗವಾಗುತ್ತಿಲ್ಲ. ನೀರೆಲ್ಲಾ ವೇಸ್ಟಾಗುತ್ತಿದೆ. ಈ ರೀತಿ ವೇಸ್ಟಾಗುವ ನೀರನ್ನು ತಡೆಗಟ್ಟಿದರೆ ಮರೆನಾಡ ಕೆರೆ ಭರ್ತಿಯಾಗುವುದಲ್ಲದೆ ಇನ್ನೂ ನಾಲ್ಕು ಕೆರೆಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಿದೆ.ಆದರೆ ಅಲ್ಲಿ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಜೊತೆಗೆ ಅಲ್ಲಿ ಸರಿಯಾದಂಥ ವ್ಯವಸ್ಥೆ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳ ಹತ್ತಿರ ಏನಾದರೂ ವರದಿ ಇದೆಯೇ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ಬಗ್ಗೆ ನನ್ನ ಹತ್ತಿರ ವರದಿ ಇಲ್ಲ. ಈ ಬಗ್ಗೆ ವಿವರವಾದಂಥ ತನಿಖೆ ಮಾಡಿಸಿ ವರದಿಯನ್ನು ತರಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಆದಷ್ಟು ಬೇಗ ಮಾನ್ಯ ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದು ಕೊಂಡರೆ ನಾನು ತಮಗೆ ಕೃತಜ್ಞನಾಗಿರುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆಗಬಹುದು.

(ಪ್ರಶ್ನೆ ೫೯೧ ಸದಸ್ಯರು ಹಾಜರಿಲ್ಲಾ)

Scarcity of Drinking Water in Sagar Town.

711 SRI L. T. THIMMAPPA HEGDE (Sagar).—Will the Minister for Housing and Urban Development be pleased to state:—

(*a*) whether it has come to the notice of the Government that Citizens of Sagar Town are put to hardship due to inadequate supply of water at the present system of water supply;

(*b*) whether any scheme has been formulated keeping in view of the requirement of the water to the entire town ; if so, what is its stage now;

(*c*) whether Govt. have specified any time limit to complete this Scheme?